**ದಿನಾಂಕ: 10/08/2021ರಂದು ಮೆ. ಎಸ್.ಪಿ.ಸಿ.ಐ.ಪಿ.ಎಲ್–ಆರ್.ಎಂ.ಎನ್ (ಜೆವಿ) ಇವರು ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಹರನಗಿರಿ ಗ್ರಾಮದ ಸ. ನಂ. 173(ಭಾಗ)ರ ಪಕ್ಕದಲ್ಲಿನ ತುಂಗಭದ್ರಾ ನದಿ ತೀರದಲ್ಲಿ ಹರನಗಿರಿ ಮರಳು ಗಣಿಗಾರಿಕೆ ವಲಯ–05ರಲ್ಲಿ ವರ್ಷಕ್ಕೆ 54000 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುವ ಬಗ್ಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡವಳಿಗಳು**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಹರನಗಿರಿ ಗ್ರಾಮದ ಸ. ನಂ. 173(ಭಾಗ)ರ ಪಕ್ಕ |
| ದಿನಾಂಕ | : 10/08/2021 |
| ಅಧ್ಯಕ್ಷತೆ | : ಎಸ್. ಬಿ. ಶೆಟ್ಟೆಣ್ಣವರ., ಭಾ.ಆ.ಸೇ. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿ, ಹಾವೇರಿ ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | : **ಅನುಬಂಧ–1** |
| ಯೋಜನಾದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | : **ಅನುಬಂಧ–2** |
| ಭಾಗವಹಿಸಿದ ಸಾರ್ವಜನಿಕರ ವಿವರ | : **ಅನುಬಂಧ–3** |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಭಿಪ್ರಾಯಗಳ ಪತ್ರಗಳು | : **ಅನುಬಂಧ–4** |

**ಪೀಠಿಕೆ:–**

ಮೆ. ಎಸ್.ಪಿ.ಸಿ.ಐ.ಪಿ.ಎಲ್–ಆರ್.ಎಂ.ಎನ್ (ಜೆವಿ) ಇವರು ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಹರನಗಿರಿ ಗ್ರಾಮದ ಸ. ನಂ. 173(ಭಾಗ)ರ ಪಕ್ಕದಲ್ಲಿನ ತುಂಗಭದ್ರಾ ನದಿ ತೀರದಲ್ಲಿ ಹರನಗಿರಿ ಮರಳು ಗಣಿಗಾರಿಕೆ ವಲಯ–05ರಲ್ಲಿ ಒಟ್ಟು 13.00 ಎಕರೆ (5.260 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 54000 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.

ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ ಇವರು ದಿನಾಂಕ: 14.09.2006ರಂದು ಹೊರಡಿಸಿರುವ ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ ಮತ್ತು ಇತರೆ ತಿದ್ದುಪಡಿ ಪ್ರಕಾರ, ಸದರಿ ಯೋಜನೆಗೆ ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ (SEIAA), ಕರ್ನಾಟಕ ದಿಂದ ಪರಿಸರ ವಿಮೋಚನ ಪತ್ರ ಪಡೆಯುವ ಪೂರ್ವದಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಗೆ Terms of References (ಟಿ.ಓ.ಆರ್) ಅನ್ನು ಪತ್ರ ಸಂಖ್ಯೆ: SEIAA 312MIN 2020 ದಿನಾಂಕ: 25/02/2021ರಂದು ನೀಡಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆ ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ 'ಕರಡು ಪರಿಸರ ಆಘಾತ ಅಂದಾಜೀಕರಣ ವರದಿಯನ್ನು' ಹಾಗೂ ಇದರ ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ

ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ದಿನಾಂಕ: 04/03/2021 ರಂದು ಮೆ. ಎಸ್.ಪಿ.ಸಿ.ಐ.ಪಿ.ಎಲ್–ಆರ್.ಎಂ.ಎನ್ (ಜೆವಿ) ಇವರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಸಂಬಂಧಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು ಉದ್ದೇಶಿತ ಯೋಜನಾ ಸ್ಥಳದಲ್ಲಿ ದಿನಾಂಕ: 25/05/2021ರಂದು ಪೂರ್ವಾಹ್ನ 11:30 ಗಂಟೆಗೆ ನಿಗದಿಪಡಿಸಲಾಗಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **"ದಿ ಹಿಂದೂ"** ಮತ್ತು ಕನ್ನಡ ಪತ್ರಿಕೆಯಾದ **"ವಿಜಯ ಕರ್ನಾಟಕ"** ದಿನ ಪತ್ರಿಕೆಗಳಲ್ಲಿ ದಿನಾಂಕ: 24/04/2021 ರಂದು ನೀಡಲಾಗಿರುತ್ತದೆ. ಅಲ್ಲದೇ ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆಯಾದ **"ಕೌರವ" ದಿನಪತ್ರಿಕೆಯಲ್ಲೂ** ಸಹ ದಿನಾಂಕ: 28/04/2021 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಆದರೆ ಕೋವಿಡ್–19 ಸಾಂಕ್ರಾಮಿಕ ಹರಡುವಿಕೆಯಿಂದ ಆಲಿಕೆ ಸಭೆಯನ್ನು ಮುಂದೂಡಿ ದಿನಾಂಕ: 16/05/2021ರಂದು ಕನ್ನಡ ಪತ್ರಿಕೆಯಾದ **"ವಿಜಯವಾಣಿ"** ದಿನ ಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು.

ನಂತರ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ದಿನಾಂಕ: 10/08/2021ರಂದು ಪೂರ್ವಾಹ್ನ 11:30 ಗಂಟೆಗೆ ಮರುನಿಗದಿಪಡಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **"ಡೆಕ್ಕನ್ ಹೆರಾಲ್ಡ್"** ಮತ್ತು ಕನ್ನಡ ಪತ್ರಿಕೆಯಾದ **"ವಿಜಯ ಕರ್ನಾಟಕ"** ದಿನ ಪತ್ರಿಕೆಗಳಲ್ಲಿ ದಿನಾಂಕ: 10/07/2021 ರಂದು ನೀಡಲಾಗಿದ್ದು, ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆಯಾದ **"ಕೌರವ" ದಿನಪತ್ರಿಕೆಯಲ್ಲಿ** ದಿನಾಂಕ: 11/07/2021ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿರುತ್ತದೆ. ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ–ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಆಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ಹಾವೇರಿ ಜಿಲ್ಲೆ, ಹಾವೇರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಹಾವೇರಿ ಜಿಲ್ಲೆ, ಹಾವೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಜಿಲ್ಲೆ, ಹಾವೇರಿ, ತಾಲ್ಲೂಕು ಪಂಚಾಯತಿ, ರಾಣೇಬೆನ್ನೂರು, ಗ್ರಾಮ ಪಂಚಾಯತಿ ಕಾರ್ಯಾಲಯ, ಹರನಗಿರಿ, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಾವೇರಿ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ: 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್‌ಸ್ಟ್ರೀಟ್, ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

ದಿನಾಂಕ: 10/08/2021 ರಂದು ಬೆಳಿಗ್ಗೆ 11:30 ಗಂಟೆಗೆ ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಹರನಗಿರಿ ಗ್ರಾಮದ ಉದ್ದೇಶಿತ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲಾಯಿತು. ಶ್ರೀ ಎಂ. ಎಸ್. ಮಹೇಶ್ವರಪ್ಪ, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ ಹಾವೇರಿ ಇವರು ಶ್ರೀ ಎಸ್. ಬಿ. ಶೆಟ್ಟೆಣ್ಣವರ, ಭಾ.ಆ.ಸೇ. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ, ಶ್ರೀ ಎಸ್. ಬಿ. ಉಳ್ಳೇಗಡ್ಡಿ, ಉಪ ವಿಭಾಗಾಧಿಕಾರಿಗಳು, ಹಾವೇರಿ ಉಪ ವಿಭಾಗ, ಶ್ರೀ ಶಂಕರ ಜಿ. ಎಸ್, ತಹಶೀಲದಾರರು, ರಾಣೇಬೆನ್ನೂರು ತಾಲ್ಲೂಕು, ರಾಣೇಬೆನ್ನೂರು, ಇತರೆ ಇಲಾಖೆಯ ಅಧಿಕಾರಿಗಳು, ಯೋಜನೆಯ ಪ್ರತಿನಿಧಿಗಳು ಹಾಗೂ ಸ್ಥಳದಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು.

ಶ್ರೀ ಎಂ. ಎಸ್. ಮಹೇಶ್ವರಪ್ಪ, ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ. ಮಂಡಳಿ, ಹಾವೇರಿ ಇವರು ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಇವರ ಪರಿಸರ ಆಘಾತ ಅಧಿಸೂಚನೆ, 2006ರನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮಗಳನ್ನು ವಿವರಿಸಿದರು ಮತ್ತು ಉದ್ದೇಶಿತ ಪ್ರಸ್ತಾವನೆಯು ಪರಿಸರ ಆಘಾತ ಅಧಿಸೂಚನೆ, 2006 ಮತ್ತು ತಿದ್ದುಪಡಿಯ ವ್ಯಾಪ್ತಿಯಲ್ಲಿ ಸೇರಿರುವುದರಿಂದ, ಪರಿಸರ ಸಾರ್ವಜನಿಕ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಸಭೆಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಸದರಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. ಅದರಂತೆ, ಶ್ರೀ ಎಸ್. ಬಿ. ಶೆಟ್ಟೆಣ್ಣವರ, ಭಾ.ಆ.ಸೇ. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ಇವರು ಸಭೆಯ ಮಹತ್ವವನ್ನು ತಿಳಿಸುತ್ತಾ, ಮೆ. ಎಸ್.ಪಿ.ಸಿ.ಐ.ಪಿ.ಎಲ್–ಆರ್.ಎಂ.ಎನ್ (ಜೆವಿ) ಇವರ ಪ್ರತಿನಿಧಿಯವರಿಗೆ ಯೋಜನೆಯ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಲು ನಿರ್ದೇಶಿಸಿದರು ಮತ್ತು ಯೋಜನೆಯ ಬಗ್ಗೆ ಅಭಿಪ್ರಾಯಗಳು, ಆಕ್ಷೇಪಗಳು ಇದ್ದಲ್ಲಿ ಯೋಜನೆಯ ಪ್ರತಿನಿಧಿಗಳು ಉದ್ದೇಶಿತ ಯೋಜನೆಯನ್ನು ಪ್ರಸ್ತುತಪಡಿಸಿದ ನಂತರ ತಿಳಿಸಲು ಸಾರ್ವಜನಿಕರಿಗೆ ಸೂಚಿಸಿದರು.

ಮೆ. ಎಸ್.ಪಿ.ಸಿ.ಐ.ಪಿ.ಎಲ್–ಆರ್.ಎಂ.ಎನ್ (ಜೆವಿ) ಇವರ ಪರವಾಗಿ ಮೆ॥ ಹಾರಿಜನ್ ವೆಂಚರ್ಸ್‌ನ ಶ್ರೀ ಸಚಿನ್ ಎಂ.ಯು. ಇವರು, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ತುಂಗಾ ಮೇಲ್ದಂಡೆ ಯೋಜನೆ ವಿಭಾಗ, ರಾಣೇಬೆನ್ನೂರು ಇವರ ಪರವಾಗಿ ಮೆ. ಎಸ್.ಪಿ.ಸಿ.ಐ.ಪಿ.ಎಲ್–ಆರ್.ಎಂ.ಎನ್(ಜೆವಿ) ಇವರು ಹರನಗಿರಿ ಗ್ರಾಮದ ಸ. ನಂ. 173(ಭಾಗ)ರ ಪಕ್ಕದಲ್ಲಿನ ತುಂಗಭದ್ರಾ ನದಿ ತೀರದಲ್ಲಿ ಮರಳು ಗಣಿಗಾರಿಕೆ ವಲಯ–05ರಲ್ಲಿ ಒಟ್ಟು 13.00 ಎಕರೆ (5.260 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 54000 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಉದ್ದೇಶಿತ ಮರಳು ಗಣಿಗಾರಿಕೆಯನ್ನು ಅರೆ ಯಾಂತ್ರೀಕೃತ (ಓಪನ್ ಕ್ಯಾಸ್ಟ್ ಮೈನಿಂಗ್) ವಿಧಾನದಲ್ಲಿ ಮಾಡಲಾಗುವುದು. ಹಿಟಾಚಿ ಮತ್ತು ಜೆಸಿಬಿಯನ್ನು ಅಗೆಯಲು ಮತ್ತು ಲೋಡ್ ಮಾಡುವ ಚಟುವಟಿಕೆಗಳಿಗೆ ಬಳಸಲಾಗುವುದೆಂದು ಸಭೆಗೆ ತಿಳಿಸಿದರು. ಸದರಿ ಯೋಜನೆ ಕುರಿತಾದ ಪ್ರಮುಖ ಅಂಶಗಳು, ಯೋಜನೆಯಿಂದ ಸುತ್ತಲಿನ ಪರಿಸರಕ್ಕೆ ಆಗಬಹುದಾದ ಪರಿಣಾಮ, ಪರಿಸರ ನಿರ್ವಹಣೆ, ಮಾಲಿನ್ಯ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗುವ ಕ್ರಮಗಳು, ಸಿಎಸ್‌ಆರ್ ಚಟುವಟಿಕೆಗಳ ಕುರಿತು ಸಭೆಗೆ ವಿವರಿಸಿದರು. ಸಭೆಯಲ್ಲಿ ಪ್ರಸ್ತುತ ಪಡಿಸಲಾದ ಪ್ರಸ್ತಾವನೆಯ ಪ್ರತಿಯನ್ನು ಅನುಬಂಧ–5ರಲ್ಲಿ ಲಗತ್ತಿಸಿದೆ.

ಘಟಕದ ಪ್ರತಿನಿಧಿಗಳು ಉದ್ದೇಶಿತ ಯೋಜನೆಯನ್ನು ಪ್ರಸ್ತುತಪಡಿಸಿದ ನಂತರ ಈ ಕೆಳಕಂಡಂತೆ ಸಾರ್ವಜನಿಕರು ತಮ್ಮ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

(1) ಶ್ರೀ ಕುರುವತ್ತೆಪ್ಪ ವೀರಣ್ಣ ಜ್ಯೋತಿ, ಹರನಗಿರಿ

ಇವರು ಮಾತನಾಡುತ್ತಾ, ಆಳವಾದ ಡಿಗ್ಗಿಂಗ್ ಮಾಡಬಾರದು ಮತ್ತು ಪಕ್ಕದ ಜಮೀನುಗಳಲ್ಲಿ ಡಿಗ್ಗಿಂಗ್ ಮಾಡಬಾರದು ಇದನ್ನು ಬಿಟ್ಟು ಮಾಡಬಹುದು, ಆ ರೀತಿ ಮಾಡಿದ್ದಲ್ಲಿ ನಮ್ಮದು ತಕರಾರು ಇದೆ. ಮಷಿನ್ ಮುಖಾಂತರ ಆಳವಾಗಿ ಅಗೆಯುವುದಕ್ಕೆ ಅವಕಾಶ ಮಾಡಿಕೊಡಬಾರದು ಆ ರೀತಿ ಏನಾದರೂ ಕಂಡುಬಂದಲ್ಲಿ ಮನವಿ ಸಲ್ಲಿಸುತ್ತೇವೆ ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು ಹಾಗೂ ರಾತ್ರಿ ಗಣಿಗಾರಿಕೆ ನಿಲ್ಲಬೇಕು ಪ್ರತಿಯೊಂದಕ್ಕೂ ಪಾಸ್ ನೀಡಬೇಕು ರಾಜಧನ ಸರ್ಕಾರಕ್ಕೆ ಮತ್ತು ಗ್ರಾಮ ಪಂಚಾಯತಿಗೆ ಜಮಾ ಆಗುವಂತೆ ವ್ಯವಸ್ಥೆ ಆಗಬೇಕೆಂದು ಕೋರಿದರು.

(2) ಶ್ರೀ ನಾಗರಾಜ ಶಿವರುದ್ರಪ್ಪ ಐರಣಿ, ಹರನಗಿರಿ

ಇವರು ನೀವು ಹೇಳಿದಂತಹ ನಿಯಮಗಳನ್ನು ಲೀಜ್ ಹೋಲ್ಡರ್ ಪಾಲಿಸದೇ ಇದ್ದಾಗ, ಕಾನೂನು ಉಲ್ಲಂಘನೆ ಮಾಡಿದಾಗ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಮಗೆ ಮಾಹಿತಿಯನ್ನು ಕೊಡಬೇಕು ಎಂದು ಕೋರಿದರು.

(3) ಶ್ರೀ ಪ್ರವೀಣ ದೇವಪ್ಪ ಕುಪ್ಪೆಲೂರು, ಹರನಗಿರಿ

ಇವರು ಲಿಖಿತ ರೂಪದಲ್ಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದರು.

(4) ಶ್ರೀ ಕರಿಯಪ್ಪ ಅಂತರವಳ್ಳಿ, ಹರನಗಿರಿ

ಇವರು ಮಾತನಾಡುತ್ತಾ, ಗಣಿಗಾರಿಕೆ ಮಾಡಲು ಉದ್ದೇಶಿಸಿರುವುದು ಬಹಳ ಒಳ್ಳೆಯದಾಗಿದೆ ಸರ್ಕಾರದ ಸಂಪತ್ತು ಸರ್ಕಾರಕ್ಕೆ ಸೇರುವುದರಿಂದ ಬಹಳ ಒಳ್ಳೆಯದಾಗಿದೆ ಗಣಿಗಾರಿಕೆ ಮಾಡಿಕೊಂಡು ಹೋಗುವುದು ಸಂತೋಷದ ವಿಚಾರ ಮತ್ತು ತಮ್ಮ ಅಡ್ಡಿಯಿಲ್ಲವೆಂದು ತಿಳಿಸಿ ಲಿಖಿತ ರೂಪದಲ್ಲಿ ತಮ್ಮ ಅಭಿಪ್ರಾಯವನ್ನು ಸಲ್ಲಿಸಿದರು.

(5) ಶ್ರೀ ಚಂದ್ರಪ್ಪ ಪುಟ್ಟಪ್ಪ ಕುಪ್ಪೆಲೂರು, ರೈತರು, ಹರನಗಿರಿ

ಇವರು ಮಾತನಾಡುತ್ತಾ, ಈ ಗಣಿಗಾರಿಕೆಗೆ ನಮ್ಮದೇನೂ ಅಭ್ಯಂತರ ಇರುವುದಿಲ್ಲ ಆದರೆ ಬೆಳೆ ಇರುವಾಗ ರಸ್ತೆಗೆ ನೀರನ್ನು ಸಿಂಪಡಿಸುತ್ತಾ ದಾರಿಗೆ ತೊಂದರೆ ಮಾಡದಂತೆ, ಮಾಡಿಕೊಂಡು ಹೋಗಲು ನಮ್ಮದೇನೂ ಅಭ್ಯಂತರ ಇರುವುದಿಲ್ಲ ಎಂದು ತಿಳಿಸಿ ಲಿಖಿತ ರೂಪದಲ್ಲಿ ತಮ್ಮ ಅಭಿಪ್ರಾಯವನ್ನು ಸಲ್ಲಿಸಿದರು.

(6) ಶ್ರೀ ಪ್ರಭುಲಿಂಗ ಶಂಕ್ರಪ್ಪ ದ್ಯಾಮನಗೌಡ್ರು, ಹರನಗಿರಿ

ಇವರು ಮಾತನಾಡುತ್ತಾ, ಯೋಜನೆ ಕುರಿತು ನಮಗೇನೂ ಆಕ್ಷೇಪಣೆ ಇಲ್ಲ, ರೈತರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹೋದಲ್ಲಿ ಏನೂ ಸಮಸ್ಯೆಯಿಲ್ಲವೆಂದು ತಿಳಿಸಿ ಲಿಖಿತ ರೂಪದಲ್ಲಿ ತಮ್ಮ ಅಭಿಪ್ರಾಯವನ್ನು ಸಲ್ಲಿಸಿದರು.

(7) ಶ್ರೀ ಮಹೇಶ ಪೂಜಾರ, ಹರನಗಿರಿ

ಇವರು ತಮ್ಮ ಅನಿಸಿಕೆಯನ್ನು ಲಿಖಿತ ರೂಪದಲ್ಲಿ ಸಲ್ಲಿಸಿದರು.

(8) ಶ್ರೀ ಸತೀಶ ವೀರಭದ್ರಪ್ಪ ಜ್ಯೋತಿ, ಹರನಗಿರಿ

ಇವರು ಮಾತನಾಡುತ್ತಾ, ಪರಿಸರ ಸಾರ್ವಜನಿಕ ಆಲಿಕೆ ಸಭೆ ಕೇವಲ ಒಂದು ದಿನದ ಸಭೆ ಆಗಬಾರದು, ಈ ಕಾರ್ಯಕ್ರಮದಲ್ಲಿ ಇರುವಂತಹ ಎಲ್ಲ ನೀತಿ ನಿಯಮಗಳನ್ನು ಕೆಲವೊಂದು ಜವಾಬ್ದಾರಿಗಳನ್ನು ವಿಶೇಷವಾಗಿ ಪ್ರಸ್ತಾವನೆ ಮೂಲಕ ಎಲ್ಲರಿಗೂ ತಿಳಿಸಿರುತ್ತೀರಿ. ಇವತ್ತು ಗಣಿಗಾರಿಕೆಯಿಂದ ಪರಿಸರ, ಜೈವಿಕ ಮತ್ತು ಅಜೈವಿಕ ಘಟಕಗಳು ನಾಶವಾಗುತ್ತಿವೆ. ಗಣಿಗಾರಿಕೆಯಿಂದ ಪರಿಸರಕ್ಕೆ ರೈತರಿಗೆ ಮೇಲೆ ದುಷ್ಪರಿಣಾಮ ಆಗುತ್ತಿವೆ. ಈ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಎಲ್ಲಾ ನೀತಿ ನಿಯಮಗಳನ್ನು ಸರಿಯಾಗಿ ಅನುಷ್ಠಾನ ಮಾಡಬೇಕು. ವಿಶೇಷವಾಗಿ ಈ ಗಣಿಗಾರಿಕೆಯಿಂದ ರೈತರಿಗೆ ಯಾವುದೇ ತೊಂದರೆ ಆಗದಂತೆ ಮತ್ತು ಸುತ್ತಮುತ್ತಲಿರುವ ಜಮೀನುಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ವಿಶೇಷವಾದ ಒಂದು ಅನುದಾನವನ್ನು ಮೀಸಲಿರಿಸಿ ಇದನ್ನು ಸಮರ್ಪಕವಾಗಿ ಯಾರಿಗೂ ತೊಂದರೆಯಾಗದಂತೆ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ಅನುದಾನಕ್ಕೆ ಉಪಯೋಗವಾಗುವ ರೀತಿ ಇದನ್ನು ಅನುಷ್ಠಾನ ಮಾಡಬೇಕೆಂದು ಹರನಗಿರಿ ಗ್ರಾಮದ ಸಮಸ್ತ ನಾಗರೀಕರ ಪರವಾಗಿ ಮತ್ತು ರೈತರ ಪರವಾಗಿ ಕೋರಿದರು.

(9) ಶ್ರೀ ಅಶೋಕ ರಾಮಪ್ಪ ಚಿಕ್ಕಪ್ಪ, ಹರನಗಿರಿ

ಇವರು ಮಾತನಾಡುತ್ತಾ, ಎಸ್‌ಸಿ ಎಸ್‌ಟಿಗೆ ಸೇರಿದ 150 ರಿಂದ 200 ಜನ ಲೇಬರ್ಸ್ ಇರುವುದಾಗಿ, ಜೆಸಿಬಿಯಿಂದ ಕೆಲಸ ಮಾಡುವುದರಿಂದ ನಮ್ಮ ಜೀವನದ ಗತಿಯೇನು ಎಂದು ಪ್ರಶ್ನಿಸಿದರು. ಇದಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ಏನು ಕೆಲಸ ಮಾಡುತ್ತಿರುವಿರಿ ಎಂದು ಪ್ರಶ್ನಿಸಲಾಗಿ ನಾವು ಮರಳನ್ನು ಲಾರಿಗಳಿಗೆ ಮತ್ತು ಟಿಪ್ಪರುಗಳಿಗೆ ತುಂಬುತ್ತಿರುವುದಾಗಿ ತಿಳಿಸಿದರು. ಇದಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ಪರಿಶೀಲಿಸುವುದಾಗಿ ತಿಳಿಸಿದರು.

(10) ಶ್ರೀ ಬಸವರಾಜ ಗಂಜಾಳ, ಹರನಗಿರಿ

ಇವರು ಮಾತನಾಡುತ್ತಾ, ಈ ಮರಳನ್ನು ಈ ಹಿಂದೆ ಆಕ್ರಮವಾಗಿ ಬಳಸಿದ್ದಾರೆ ಇನ್ನು ಮುಂದೆ ಸರ್ಕಾರಕ್ಕೆ ಲಾಭ ಆಗುವುದರಿಂದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ನಡೆಸಬೇಕೆಂದು ವಿನಂತಿಸಿ ತಮ್ಮ ಮನವಿಯನ್ನು ಲಿಖಿತ ರೂಪದಲ್ಲಿ ಸಲ್ಲಿಸಿದರು.

(11) ಶ್ರೀ ಆನಂದ, ಹರನಗಿರಿ

ಇವರು ಮಾತನಾಡುತ್ತಾ, ಹೆಚ್ಚುವರಿ ಟನ್‌ನ್ನೊಂದಿಗೆ ವಾಹನಗಳ ಸಂಚಾರದಿಂದ ಹೊಲದಲ್ಲಿನ ಪೈಪ್‌ಲೈನಗೆ ಸಮಸ್ಯೆಯಾದಲ್ಲಿ ಅದಕ್ಕೆ ಮುಂದೆ ಪರಿಹಾರವೇನು ಎಂದು ಪ್ರಶ್ನಿಸಿದರು. ಇದಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ರಸ್ತೆ ನಿರ್ವಹಣೆಯನ್ನು ತಾವೇ ಮಾಡುವುದಾಗಿ ಯೋಜನೆಯಲ್ಲಿ ತಿಳಿಸಿರುವುದರಿಂದ ಏನಾದರೂ ಹಾನಿಯಾದಲ್ಲಿ ಅವರೇ ಪರಿಹಾರ ನೀಡುತ್ತಾರೆ, ಆ ರೀತಿ ಆಗದಂತೆ ನೋಡಿಕೊಳ್ಳುವುದು ಅವರ ಜವಾಬ್ದಾರಿ ಆತಂಕ ಪಡಬಾರದು ಎಂದು ತಿಳಿಸಿದರು.

(12) ಶ್ರೀ ಹೊನ್ನಪ್ಪ ಹನುಮಂತಪ್ಪ ಪೂಜಾರ, ಹರನಗಿರಿ

ಇವರು ಮಾತನಾಡುತ್ತಾ, ಈ ಹಿಂದೆ ಮರಳು ಗಣಿಗಾರಿಕೆ ಆಕ್ರಮವಾಗಿ ನಡೆದಿದ್ದು ಇದರಿಂದ ಸರ್ಕಾರಕ್ಕೆ ಲಾಭವಾಗುತ್ತಿತ್ತೊ ನಷ್ಟವಾಗುತ್ತಿತ್ತೋ ನಮಗೆ ಗೊತ್ತಿಲ್ಲ. ಆದರೆ ಈ ಯೋಜನೆ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು, ಮಾನ್ಯ ತಹಶೀಲ್ದಾರರು ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯ

ನೇತೃತ್ವದಲ್ಲಿ ನಡೆದಂತಹ ಸಭೆಯು ನಮಗೆಲ್ಲ ಮಾನ್ಯವಾಗಿದ್ದು, ನಮಗೆಲ್ಲ ಈ ಯೋಜನೆ ಕುರಿತು ಈಗಾಗಲೇ ತಿಳಿಸಿದ್ದು ಆ ರೀತಿ ಮಾಡಿಕೊಂಡು ಹೋಗಲು ನಮಗೆಲ್ಲ ಯಾವುದೇ ಅಭ್ಯಂತರ ಇರುವುದಿಲ್ಲವೆಂದು ತಿಳಿಸಿ, ಲಿಖಿತ ರೂಪದಲ್ಲಿ ತಮ್ಮ ಅಭಿಪ್ರಾಯವನ್ನು ಸಲ್ಲಿಸಿದರು.

(13) ಶ್ರೀಮತಿ ಮಂಜುಳ, ಎನ್‌ಜಿಓ ಚಿತ್ರದುರ್ಗ

ಇವರು ತಮ್ಮ ಅನಿಸಿಕೆಯನ್ನು ಲಿಖಿತ ರೂಪದಲ್ಲಿ ಸಲ್ಲಿಸಿದರು.

ಸಭೆಯ ಕೊನೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಎಲ್ಲಾ ಸಾರ್ವಜನಿಕ ಬಂಧುಗಳಿಗೆ ಈ ಸಭೆಗೆ ಸಾಕಷ್ಟು ತಯಾರಿ ಮಾಡಿಕೊಂಡು ಪತ್ರಿಕಾ ಪ್ರಕಟಣೆ ನೀಡಿದ್ದು, ಹಿಂದೆ ಸಭೆ ಮುಂದೂಡಿದ್ದು ಪುನಃ ಸಾಕಷ್ಟು ಅವಕಾಶ ನೀಡಿ ಆಲಿಕೆ ಸಭೆ ನಡೆಸಲಾಗಿರುತ್ತದೆ. ಇಲ್ಲಿ ಬಂದಿರೊ ಒಟ್ಟಾರೆ ಸಾರ್ವಜನಿಕ ಅಭಿಪ್ರಾಯ ಗಣಿಗಾರಿಕೆ ನಡೆಸಲು ಯಾವುದೇ ಅಭ್ಯಂತರ ಇಲ್ಲವೆಂದು, ಆದರೆ ಯೋಜನೆಯಲ್ಲಿ ಪ್ರಸ್ತಾಪಿಸಿದಂತೆ ಎಲ್ಲಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಹೋಗಬೇಕು ಮುಖ್ಯವಾಗಿ ಹೆಚ್ಚು ಆಳದವರೆಗೆ ಅಗೆಯಬಾರದು ಎಂಬುದು ನಿಮ್ಮೆಲ್ಲರ ಬೇಡಿಕೆ. ವೈಯಕ್ತಿಕವಾಗಿ ನನಗೆ ಇಲ್ಲಿಯವರೆಗೆ ಬರುವ ರಸ್ತೆಯು ಕಿರಿದೆನಿಸಿದ್ದು, ಹೆಚ್ಚು ಭಾರವನ್ನು ರಸ್ತೆಯು ತಡೆಯುವುದಿಲ್ಲವೆಂದು ನೋಡಿದರೆ ಅನಿಸುತ್ತದೆ. ಆದ್ದರಿಂದ ಈ ಕುರಿತು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಯೋಜನೆದಾರರಿಗೆ ತಿಳಿಸಿ, ಹಸಿ ಮರಳನ್ನು ದೂಳಾಗದಂತೆ ತಾಡಪಲ್ಲನ್ನು ಹೊದಿಸಿಕೊಂಡು, ಜಾಸ್ತಿ ಶಬ್ಧವಾಗದಂತೆ ಹೊಲಗಳಿಗೆ ಓಡಾಡುವ ರೈತರಿಗೆ ತೊಂದರೆಯಾಗದಂತೆ ಕೆಲಸ ನಿರ್ವಹಿಸಬೇಕಿರುತ್ತದೆ. ಇದರಿಂದ ಸರ್ಕಾರಕ್ಕೆ ರಾಜಧನ ಬರುವುದಲ್ಲದೇ ಸಿಎಸ್‌ಆರ್ ಅಡಿಯಲ್ಲಿ ಹಣವನ್ನು ತೊಡಗಿಸುತ್ತಾರೆ ಸರ್ಕಾರಕ್ಕೆ ಆದಾಯ ತರುವುದಲ್ಲದೆ ಸಿಎಸ್‌ಆರ್ ಚಟುವಟಿಕೆಗಳಲ್ಲಿ ಹಣವನ್ನು ತೊಡಗಿಸುತ್ತಾರೆ. ಇದರೊಂದಿಗೆ ಡಿಸ್ಟ್ರಿಕ್ಟ್ ಮಿನರಲ್ ಫಂಡನಲ್ಲಿನ ಹಣವನ್ನು ಬಳಸಿ ಇಲ್ಲಿ ಕೆಲವೊಂದು ಕೆಲಸಗಳನ್ನು ಮಾಡಬಹುದು ಸಾರ್ವಜನಿಕರು ಹೇಳಿದ ಅಭಿಪ್ರಾಯಗಳನ್ನು ವೀಡಿಯೋ ರೆಕಾರ್ಡ್ ಮಾಡಿದ್ದು, ಹೇಳಿದ ಎಲ್ಲಾ ಆಕ್ಷೇಪಣೆಗಳನ್ನು ದಾಖಲಿಸಿ, ಸಭೆಯ ನಡಾವಳಿಯೊಂದಿಗೆ ವೀಡಿಯೋ ಸಿಡಿ, ಛಾಯಾ ಚಿತ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರ ಮುಖಾಂತರ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ರವಾನಿಸುವುದಾಗಿ ತಿಳಿಸಿದರು.

ಸಭೆಗೆ ಆಗಮಿಸಿದ್ದ ಎಲ್ಲರಿಗೂ ಶ್ರೀ ರಾಜೇಶ್ ಪಿ, ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ. ಮಂಡಳಿ, ಹಾವೇರಿ ಇವರು ವಂದಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಎಸ್. ಬಿ. ಶೆಟ್ಟೆಣ್ಣವರ, ಭಾ.ಆ.ಸೇ.
ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಪರಿಸರ ಸಾರ್ವಜನಿಕ ಸಭೆ, ಹಾವೇರಿ ಜಿಲ್ಲೆ